## ಆಗಲೆ ರೆಡಿ

ಗುಂಡನ ಮಗ ತನ್ನ ತಾಯಿಗೆ 'ಅಮ್ಮಾ, ಆಗಲೇ ಅಪ್ಪ ಆಫೀಸಿಗೆ ರೆಡಿಯಾಗಿದ್ದಾರೆ' ಎಂದು ಹೇಳಿದ. 'ಅವರು ಆಫೀಸಿಗೆ ಹೋಗಲು ಇನ್ನೂ ಒಂದು ಗಂಟೆ ಇದೆ. ಆಗಲೇ ರೆಡಿಯಾದ್ರಾ?' ಎಂದಳು ಗುಂಡನ ಹೆಂಡತಿ. 'ಹೌದು ಅಮ್ಮಾ, ನಿಜವಾಗಲೂ ರೆಡಿಯಾಗಿದ್ದಾರೆ. ನೋಡು ಬಾ, ಅವರು ತೂಕಡಿಸುತ್ತಾ ಕುಳಿತಿದ್ದಾರೆ' ಎಂದ ಮಗ!

**ಶಂಕರೇಗೌಡ ತುಂಬಕೆರೆ**





## ಸೂಕ್ತ ಸಲಹೆ

ಮನೆಯ ಕಿಟಕಿಯಿಂದ ನುಸುಳಿಬಂದ ಹಲ್ಲಿಯೊಂದನ್ನು ಓಡಿಸುವ ಪ್ರಯತ್ನದಲ್ಲಿದ್ದ ತಾತ, 'ಅದೇನಾದರೂ ನನ್ನ ಮೈಮೇಲೆ ಬಿದ್ದು ಬಿಟ್ಟರೆ ಏನು ಮಾಡುವುದು?' ಎಂದು ಅಜ್ಜಿಯನ್ನು ಕೇಳಿದರು. ಅಜ್ಜಿ, 'ಅಂಥದ್ದೇನೂ ಆಗಲ್ಲ, ಓಡಿಸಿ' ಎನ್ನುವಷ್ಟರಲ್ಲಿ ಅಲ್ಲೇ ನಿಂತಿದ್ದ ಪುಟ್ಟಿ, 'ಏನಾದರೂ ಆಗಲಿ, ಬಿಡಲಿ, ಕೈಯಲ್ಲೊಂದು ಪಂಚಾಂಗ ಹಿಡಿದುಕೊಂಡಿರಿ ಅಜ್ಜಾ, ಒಂದುವೇಳೆ ಹಲ್ಲಿ ಮೈಮೇಲೆ ಬಿದ್ದರೆ, ಶುಭವೊ, ಅಶುಭವೊ ಕೂಡಲೇ ನೋಡಬಹುದು' ಎಂದಳು.

**ಎಂ.ಆರ್. ರಘುನಾಥ್**